ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

CIN NO: U40109KA2004SGC035177 — ನಿಗಮದ ಅಧಿಕೃತ
ವೆಬ್‌ಸೈಟ್:www.cescmysore.org

| | | |
|---|---|---|
| ದೂರವಾಣಿ ಸಂಖ್ಯೆ:08224-297504<br>ದೂರವಾಣಿ ಸಂಖ್ಯೆ:08224-268845<br>ಇಟಚಃ: aeehanur@cescmysore.org<br>ceschanur@gmail.com | ನಿಗಮ ಕಾರ್ಯಾಲಯ<br>ನಂ.29, ವಿಜಯನಗರ 2ನೇ ಹಂತ<br>ಹಿನಕಲ್, ಮೈಸೂರು-570 017. | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)<br>ರವರ ಕಛೇರಿ, ಚಾ.ವಿ.ಸ.ನಿ.ನಿ. ಉಪವಿಭಾಗ,<br>ಹನೂರು – 571439 |
| ಸಂ.ಸಕಾನಿಇಂ(ವಿ)/ಸಇ(ತಾಂ)/ಹಉವಿ/2019-20 | | ದಿನಾಂಕ: 19.12.2019 |


# -: ಜನ ಸಂಪರ್ಕ ಸಭೆ :-

## ನಡಾವಳಿ

ದಿನಾಂಕ 19.12..2019 ರಂದು ಹನೂರು ಉಪವಿಭಾಗದಲ್ಲಿ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೊಳ್ಳೇಗಾಲ ವಿಭಾಗ , ಚಾವಿಸನಿನಿ ಇವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಹನೂರು ಉಪವಿಭಾಗಕ್ಕೆ ಸಂಬಂದಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು**

| ಶ್ರೀಯುತರು: | ಪದನಾಮ. |
|---|---|
| 1. ಶ್ರೀ.ಟಿ.ಪ್ರದೀಪ್ | : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗ ಕಛೇರಿ, ಕೊಳ್ಳೇಗಾಲ. |
| 2. ಶ್ರೀ.ಎ.ಎಂ.ಶಂಕರ್ | : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಹನೂರು ಉಪವಿಭಾಗ. |
| 3. ಶ್ರೀ.ಬಿ.ರಂಗಸ್ವಾಮಿ | : ಸಹಾಯಕ ಇಂಜಿನಿಯರ್(ವಿ), ತಾಂತ್ರಿಕ ಶಾಖೆ, ಹನೂರು ಉಪವಿಭಾಗ ಹಾಗೂ ಶಾಖಾಧಿಕಾರಿ ರಾಮಾಪುರ ಶಾಖೆ, |
| 4. ಶ್ರೀ.ಆರ್.ಭಾಸ್ಕರ್ | : ಪ್ರಭಾರ ಸಹಾಯಕ ಇಂಜಿನಿಯರ್(ವಿ),ಹನೂರು ಶಾಖೆ, ಹನೂರು ಉಪವಿಭಾಗ |
| 5. ಶ್ರೀ.ನೌಷದ್ ಪಾಷ | : ಕಿರಿಯ ಇಂಜಿನಿಯರ್(ವಿ), ಲೊಕ್ಕನಹಳ್ಳಿ ಶಾಖೆ, ಹನೂರು ಉಪವಿಭಾಗ. |
| 6. ಶ್ರೀ.ಎನ್.ಮಹೇಶ್ | : ಪ್ರಭಾರ ಕಿರಿಯ ಇಂಜಿನಿಯರ್(ವಿ), ಕೌದಳ್ಳಿ ಶಾಖೆ ಮತ್ತು ಮಹದೇಶ್ವರಬೆಟ್ಟ ಶಾಖೆ. |
| 7. ಶ್ರೀ.ಮಹಮ್ಮದ್ ರಿಯಾಝ್ | : ಪ್ರಭಾರ ಹಿರಿಯ ಸಹಾಯಕ, ಕಂದಾಯ ಶಾಖೆ. ಹನೂರು ಉಪವಿಭಾಗ. |

ಶ್ರೀ. ಟಿ.ಪ್ರದೀಪ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗ ಕಛೇರಿ, ಕೊಳ್ಳೇಗಾಲ ರವರು ಸಭೆಗೆ ಹಾಜರಿದ್ದ ಗ್ರಾಹಕರನ್ನು ಸ್ವಾಗತಿಸಿದರು. ನಂತರ ಗ್ರಾಹಕರು ಸಭೆಯಲ್ಲಿ ಸಲ್ಲಿಸಿದ ಅಹವಾಲುಗಳ ಬಗ್ಗೆ ಈ ಕೆಳಕಂಡಂತೆ ಚರ್ಚಿಸಿ ಸೂಕ್ತ ಮಾಹಿತಿಯನ್ನು ನೀಡಿರುತ್ತಾರೆ.

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಅನುಸರಣೆ |
|---|---|---|---|
| 1 | ಶ್ರೀ.ದಿನೇಶ್ ಬಂಡಳ್ಳಿ 9060456210 | *ಲೊಕ್ಕನಹಳ್ಳಿ ಗ್ರಾಮದಲ್ಲಿ ಅಂಗಮ್ಮ ಕೋಂ ವೇಲುಸ್ವಾಮಿ ಅಕ್ರಮ-ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿದ್ದು ಇದುವರೆವಿಗೂ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ಶಾಖಾಧಿಕಾರಿಗಳು ಸೂಕ್ತ ಕ್ರಮವಹಿಸುವಂತೆ ಸೂಚಿಸಿದರು. |
| 2 | ಶ್ರೀ.ದಿನೇಶ್ ಬಂಡಳ್ಳಿ 9060456210 | ಬಂಡಳ್ಳಿ ಗ್ರಾಮವು ಹೆಚ್ಚು ವಿಸ್ತೀರ್ಣವನ್ನು ಹೊಂದಿದ್ದು, ಕಿರಿಯ ಮಾರ್ಗದಾಳುಗಳು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದು, ಅನುಭವವಿರುವ ಹಾಗೂ ಹೆಚ್ಚುವರಿ ಮಾರ್ಗದಾಳುಗಳನ್ನು ನೇಮಿಸಿ ಕೊಡಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ಉಪ-ವಿಭಾಗದ ಅಧಿಕಾರಿಯ ಜೊತೆ ಚರ್ಚಿಸಿ, ಕ್ರಮವಹಿಸುವುದಾಗಿ ತಿಳಿಸಿದರು. |

| | | | |
|---|---|---|---|
| 3 | ಶ್ರೀ.ಶಿವಮಲ್ಲು, ಬಂಡಳ್ಳಿ | 250 ಕೆ.ವಿಎ ಶನಿದೇವರ ಪರಿವರ್ತಕದಲ್ಲಿ ಅಧಿಕ ಭಾರವಿದ್ದು ಹೆಚ್ಚುವರಿಯಾಗಿ ಪರಿವರ್ತಕವನ್ನು ಅಳವಡಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ ಶಾಖಾಧಿಕಾರಿಗಳು ಖುದ್ದು ಸ್ಥಳ ಪರಿಶೀಲಿಸಿ ವರದಿಯನ್ನು ಉಪ-ವಿಭಾಗ ಹಾಗೂ ವಿಭಾಗ ಕಛೇರಿಗೆ ನೀಡಲು ತಿಳಿಸಿದರು. |
| 4 | ಶ್ರೀ.ದಿನೇಶ್ ಬಂಡಳ್ಳಿ 9060456210 | 100 ಕೆ.ವಿಎ ಬಂಡಳ್ಳಿ ಪರಿವರ್ತಕದಲ್ಲಿ ಅಧಿಕ ಭಾರವಿದ್ದು ಹೆಚ್ಚು ಜನರು ಅಕ್ರಮವಾಗಿ ಐ.ಪಿ.ಸೆಟ್ ಗಳಿಗೆ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿದ್ದು, ವಿದ್ಯುತ್ ನಿಲುಗಡೆ ಗೊಳಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ಶಾಖಾಧಿಕಾರಿಗಳು ಸೂಕ್ತ ಕ್ರಮವಹಿಸುವಂತೆ ಸೂಚಿಸಿದರು. |
| 5 | ಶ್ರೀ.ಪ್ರಸಾದ್, ಕಿಸ್ಸಾನ್ ಸಂಘ, ಶ್ಯಾಗ್ಯ ಗ್ರಾಮ | 100 ಕೆ.ವಿಎ ದಾಸಾಚಾರಿ ಪರಿವರ್ತಕದ ಎಲ್.ಟಿ. ಮಾರ್ಗವು ಹಲವೆಡೆ ಜೋತುಬಿದ್ದಿದ್ದು ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ದೂರಿರುತ್ತಾರೆ | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ ಶಾಖಾಧಿಕಾರಿಗಳು ಖುದ್ದು ಸ್ಥಳ ಪರಿಶೀಲಿಸಿ ಅತೀ ಜರೂರಾಗಿ ಸರಿಪಡಿಸಲು ತಿಳಿಸಿದರು. |
| 6 | ಶ್ರೀ.ಸಿದ್ದೇಗೌಡ ಹನೂರು | LKP-29 ಮತ್ತು H2CPR-21 ಸಂಪರ್ಕದಲ್ಲಿ ಜಂಪ್ ತೆಗೆದು ವಿದ್ಯುತ್ ಅಡಚಣೆಗೊಳಿಸಿರುತ್ತಾರೆ, ಏಕೆಂಬುದರ ಬಗ್ಗೆ ಸೂಕ್ತ ಕಾರಣ ನೀಡಿ ಎಂದು ದೂರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ ಶಾಖಾಧಿಕಾರಿಗೆ ಇಂದೇ ಸರಿಪಡಿಸಲು ತಿಳಿಸಿದರು. |
| 7 | ಶ್ರೀ.ಪ್ರಸಾದ್, ಕಿಸ್ಸಾನ್ ಸಂಘ, ಶ್ಯಾಗ್ಯ ಗ್ರಾಮ | ಯರಗಬಾಳು ಗ್ರಾಮದಲ್ಲಿ ಮನೆಯ ಮೇಲೆ ಎಲ್.ಟಿ ಮಾರ್ಗವು ಹಾದುಹೋಗಿದ್ದು, ಇದು ಅಪಾಯದಲ್ಲಿದ್ದು ಸರಿಪಡಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ ಶಾಖಾಧಿಕಾರಿಗಳು ಖುದ್ದು ಸ್ಥಳ ಪರಿಶೀಲಿಸಿ ಬದಲಾಯಿಸುವಂತೆ ಸೂಚಿಸಿದರು. |
| 8 | ಶ್ರೀ.ಪ್ರದೀಪ್ ಕುಮಾರ್ ಬಿನ್ ಜಯರಾಮ್, ಜಿ.ವಿ.ಗೌಡ ನಗರ, ಹನೂರು | ಮನೆಯ ಹಿಂಭಾಗ ವಿದ್ಯುತ್ ಮಾರ್ಗಗಳು ಹಾದು ಹೋಗಿದ್ದು, ಇದು ಅಪಾಯದಲ್ಲಿದ್ದು ಸ್ಥಳಾಂತರಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ಶಾಖಾಧಿಕಾರಿಗಳು ಸೂಕ್ತ ಕ್ರಮವಹಿಸುವಂತೆ ಸೂಚಿಸಿದರು. |
| 9 | ಶ್ರೀ.ದಿನಮಣಿ ನಾಯ್ಡು, ಹನೂರು | 100ಕೆ.ವಿ.ಎ ದಿನಮಣಿ ಪರಿವರ್ತಕದ ಎಲ್.ಟಿ. ಮಾರ್ಗವು ಹಲವೆಡೆ ಜೋತುಬಿದ್ದಿದ್ದು ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ದೂರಿರುತ್ತಾರೆ ಅಳವಡಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ಶಾಖಾಧಿಕಾರಿಗಳು ಸೂಕ್ತ ಕ್ರಮವಹಿಸುವಂತೆ ಸೂಚಿಸಿದರು. |
| 10 | ಶ್ರೀ.ದಿನಮಣಿ ನಾಯ್ಡು, ಹನೂರು | 63 ಕೆ.ವಿಎ ಮುನಿ ಆಲದ ಮರ ಪರಿವರ್ತಕದಲ್ಲಿ ಅಧಿಕ ಭಾರವಿದ್ದು ಹೆಚ್ಚುವರಿಯಾಗಿ ಪರಿವರ್ತಕವನ್ನು ಅಳವಡಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ ಶಾಖಾಧಿಕಾರಿಗಳು ಖುದ್ದು ಸ್ಥಳ ಪರಿಶೀಲಿಸಿ ವರದಿ ನೀಡಲು ಸೂಚಿಸಿದರು. |
| 11 | ಶ್ರೀ.ಪ್ರಸಾದ್, ಕಿಸ್ಸಾನ್ ಸಂಘ, ಶ್ಯಾಗ್ಯ ಗ್ರಾಮ | ಹಲವೆಡೆ ಪರಿವರ್ತಕಗಳು ರೈತರ ಜಮೀನಿನ ಮಧ್ಯ ಭಾಗದಲ್ಲಿದ್ದು, ಸದರಿ ಪರಿವರ್ತಕಗಳನ್ನು ಸೂಕ್ತ ಸ್ಥಳಗಳಿಗೆ ಸ್ಥಳಾಂತರಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ಹಲವಾರು ಪರಿವರ್ತಕಗಳು ಜಮೀನಿನ ಮಧ್ಯ ಭಾಗದಲ್ಲಿರುವುದು ನಾವೂ ಸಹ ನೋಡಿದ್ದು, ಆದರೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸ್ಥಳಾಂತರಿಸಿದಾಗ ಮತ್ತೊಂದು ಕಡೆಗೆ ವೋಲ್ಟೇಜ್ ನ ಸಮಸ್ಯೆಯುಗುತ್ತಿರುವುದರಿಂದ ಸ್ಥಳ ಪರಿಶೀಲಿಸಿ ಕ್ರಮವಹಿಸಲಾಗುವುದೆಂದು ತಿಳಿಸಿದರು. |
| 12 | ಶ್ರೀ.ಪ್ರಸಾದ್, ಕಿಸ್ಸಾನ್ ಸಂಘ, ಶ್ಯಾಗ್ಯ ಗ್ರಾಮ | ಬಂಡಳ್ಳಿ ಗ್ರಾಮದಲ್ಲಿ ಹೆಚ್.ಟಿ/ಎಲ್.ಟಿ. ಮಾರ್ಗಗಳು ಹಲವೆಡೆ ಜೋತುಬಿದ್ದಿದ್ದು ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ದೂರಿರುತ್ತಾರೆ ಅಳವಡಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ, ಶಾಖಾಧಿಕಾರಿಗಳು ಸೂಕ್ತ ಕ್ರಮವಹಿಸುವಂತೆ ಸೂಚಿಸಿದರು ಹಾಗೂ ಕೂಡಲೇ ಮಾರ್ಗದಾಳು ಸರಿಪಡಿಸುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 13 | ಗ್ರಾಮಸ್ಥರು. ಉಯಿಲನತ್ತ | ಉಯಿಲನತ್ತ ಗ್ರಾಮಕ್ಕೆ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕವನ್ನು ನೀಡಿರುವುದಿಲ್ಲ ಎಂದು ದೂರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ DDUGJY ಯೋಜನೆಯಡಿಯಲ್ಲಿ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಕ್ರಮವಹಿಸಿಸುವಂತೆ ಉಪ ವಿಭಾಗಧಿಕಾರಿಗಳಿಗೆ ಸೂಚಿಸಿದರು. |

| | | | |
|---|---|---|---|
| 14 | ಶ್ರೀ.ಪ್ರಸಾದ್, ಕಿಸ್ಸಾನ್ ಸಂಘ, ಶ್ಯಾಗ್ಯ ಗ್ರಾಮ | ಬಂಡಳ್ಳಿ ಸರ್ಕಾರಿ ಆಸ್ಪತ್ರೆಗೆ ನಿರಂತರಜ್ಯೋತಿ ವಿದ್ಯುತ್ ಸಂಪರ್ಕ ನೀಡಿರುವುದಿಲ್ಲ ಎಂದು ದೂರಿರುತ್ತಾರೆ. | ನಿರಂತರ ಜ್ಯೋತಿ ಯೋಜನೆಯಡಿ ಸಂಪರ್ಕ ಕಲ್ಪಿಸಲು ಸ.ಕಾ.ನಿ.ಇಂ(ವಿ) ಹನೂರು ಉಪವಿಭಾಗರವರು ಸ್ಥಳ ಹಾಗೂ ಸ್ಥಾವರದ ಪರಿಶೀಲನೆ ಮಾಡಿ, ಆಸ್ಪತ್ರೆಯ ಆರ್.ಆರ್.ಸಂಖ್ಯೆ BDAEH-14 ಮತ್ತು H1L-5852 ರಲ್ಲಿ ಒಟ್ಟಾರೆಯಾಗಿ 39327/- ಮೊತ್ತ ಬಾಕಿ ಚಾ.ವಿ.ಸ.ನಿ.ನಿ ಗೆ ಪಾವತಿಮಾಡಬೇಕಾಗಿದ್ದು, ಹಣ ಸಂದಾಯ ಆದ ಕೂಡಲೇ ನಿರಂತರ ಜ್ಯೋತಿ ವಿದ್ಯುತ್ ಸರಬರಾಜು ಮಾಡಲು ಕ್ರಮ ವಹಿಸಲಾಗುತ್ತದೆ ಎಂದು ತಿಳಿಸಿದರು. |
| 15 | ಗ್ರಾಮಸ್ಥರು. ಗುರುಗಳದೊಡ್ಡಿ | ಗುರುಗಳದೊಡ್ಡಿ ಗ್ರಾಮಕ್ಕೆ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕವನ್ನು ನೀಡಿರುವುದಿಲ್ಲ ಎಂದು ದೂರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ DDUGJY ಯೋಜನೆಯಡಿಯಲ್ಲಿ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಕ್ರಮವಹಿಸಿಸುವಂತೆ ಉಪ ವಿಭಾಗಧಿಕಾರಿಗಳಿಗೆ ಸೂಚಿಸಿದರು. |
| 16 | ಸುಂದರ್‌ನಾಯ್ಕ , 9901597935 ದೊಮ್ಮನಗದ್ದೆ | ಟೊಮಾಟೋ ಭೀಮನಯ್ಕ ನ ಪರಿವರ್ತಕದಲ್ಲಿ ಎಲ್,ಟಿ ಮಾರ್ಗದಿಂದ ನನ್ನ ಜಮೀನಿನ ಸರಿಯಾಗಿ ನನ್ನ ಐ.ಪಿ ಸೆಟ್ ಮತ್ತು ಮನೆಗೆ ಸರಿಯಾಗಿ ವಿದ್ಯುತ್ ಸರಬರಾಜಗುತ್ತಿಲ್ಲ ಎಂದು ದೂರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ ಶಾಖಾಧಿಕಾರಿಗಳು ಖುದ್ದು ಸ್ಥಳ ಪರಿಶೀಲಿಸಿ ಸರಿಪಡಿಸಿರುವಂತೆ ಸೂಚಿಸಿದರು. |
| 17 | ಗ್ರಾಮಸ್ಥರು. ಉಪ್ಪಾರದೊಡ್ಡಿ, ಹುತ್ತೂರು | ಉಪ್ಪಾರದೊಡ್ಡಿ ಗ್ರಾಮಕ್ಕೆ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕವನ್ನು ನೀಡಿರುವುದಿಲ್ಲ ಎಂದು ದೂರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಮಾತನಾಡಿ DDUGJY ಯೋಜನೆಯಡಿಯಲ್ಲಿ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಕ್ರಮವಹಿಸಿಸುವಂತೆ ಉಪ ವಿಭಾಗಧಿಕಾರಿಗಳಿಗೆ ಸೂಚಿಸಿದರು. |

ಮೇಲ್ಕಂಡ ದಿನಾಂಕದಂದು ಜನ ಸಂಪರ್ಕ ಸಭೆಯಲ್ಲಿ ಚರ್ಚಿಸಿದ ವಿಷಯಗಳ ವಿವರಗಳನ್ನು ತಮ್ಮ ಅವಗಾಹನೆಗೆ ಹಾಗೂ ಮುಂದಿನ ಕ್ರಮಕ್ಕೆ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ., ಉಪವಿಭಾಗ, ಹನೂರು.

<u>**ಪ್ರತಿಗಳನ್ನು:**</u>

1. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ, ವಿಭಾಗ ಕಛೇರಿ, ಕೊಳ್ಳೇಗಾಲ,ರವರ ಮಾಹಿತಿಗೆ ಸಲ್ಲಿಸಲಾಗಿದೆ.
2. ಶಾಖಾಧಿಕಾರಿಗಳು, ಹನೂರು/ಲೊಕ್ಕನಹಳ್ಳಿ/ರಾಮಾಪುರ/ಕೌದಳ್ಳಿ/ಮಹದೇಶ್ವರ ಬೆಟ್ಟ, ಶಾಖೆ, ರವರು ಜನ ಸಂಪರ್ಕ ಸಭೆಯಲ್ಲಿ ಚರ್ಚಿತವಾದ ದೂರಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು 07 ದಿನಗಳ ಒಳಗಾಗಿ ಸಲ್ಲಿಸಲು ಸೂಚಿಸಲಾಗಿದೆ.
3. ಸ.ಇಂ(ತಾಂ)/ಕಛೇರಿ ಕಡತಕ್ಕೆ.